Srishyla Educational Trust (R), Bheemasamudra
# GM INSTITUTE OF TECHNOLOGY
(Affiliated To VTU Belagavi, Approved By AICTE, New Delhi & Govt. of Karnataka)
Post Box No:4 P.B.Road, Davanagere-577006, Karnataka
**Phone:** 08192-252560.233377.252777. **Tel/Fax:**081920233344

## Department of Artificial Intelligence and Machine Learning

## INAUGURATION

We cordially invite you for the
***"Center of Excellence for YOUTH EMPOWERMENT"***

Chief Guest
**Mr.D Vishnu Prasad**
ICT Academy, State Head, Karnataka

Guest of Honour
**Dr.Sunil Kumar B.S**
Dean-Academics, GMIT

Principal
**Dr.Y Vijaya Kumar**

Placement Officer
**Mr. Tejasvi Kattimani T.R**
Head Dept.of Training and Placement, GMIT

Co-Ordinator
**Mr. Keerthi Prasad G**
Head Dept.of AI&ML, GMIT

Organized by
**Dept.of AI&ML and Placement**
In Collaboration with
**ICT Academy**

Date : 5-12-2022
Time: 10:30 AM

Venue :
Halamma Auditorium

A CSR initiative sponsored by

Honeywell

Implemented by

ICTACADEMY®

Inauguration of

# CENTER OF EXCELLENCE FOR YOUTH EMPOWERMENT

GM INSTITUTE OF TECHNOLOGY, DAVANGERE • PROVIDES HI-TECH EDUCATION •

05th December 2022 (11:00 am – 12:15 pm)

## PROGRAM AGENDA

| Time | Program |
|---|---|
| 11:00 am - 11:05 am | Invocation – By Students of AIML, GMIT |
| 11:05 am - 11:10 am | Welcome Speech - Mrs Kavyashree B L, Asst.Professor, AIML, GMIT |
| 11:10 am - 11:15 am | Lighting the Lamp by Dignitaries |
| 11:15 am - 11:20 am | Address by Chief Guest – D Vishnu Prasad, ICT Academy, State Head, Karnataka |
| 11:20 am - 11:35 am | Address by Guest of Honour – Dr. Sunil Kumar, Dean-Academics, GMIT |
| 11:35 am - 11:40 am | Address by Placement Officer – Tejasvi Kattimani T R |
| 11:40 am - 11:50 am | Address by Principal, GMIT – Dr. Y Vijaya Kumar |
| 11:50 am - 12:10 pm | Vote of thanks - Asha K, Asst.Professor, AIML, GMIT |

**DEPARTMENT OF ARTIFICIAL INTELLIGENCE & MACHINE LEARNING**

# Report

Department of Artificial Intelligence and Machine Learning had conducted Inauguration of Honeywell Center of Excellence for "YOUTH EMPOWERMENT" on 5th December 2022. Twenty days training was conducted for 120 selected students from CSE, ISE, and ECE department VII semester students on "AWS Technologies". Trainers were Mr. Soloman Raju and Adish Jain from Honeywell.

**Inauguration**



## DEPARTMENT OF ARTIFICIAL INTELLIGENCE & MACHINE LEARNING





**DEPARTMENT OF ARTIFICIAL INTELLIGENCE & MACHINE LEARNING**







## DEPARTMENT OF ARTIFICIAL INTELLIGENCE & MACHINE LEARNING





## DEPARTMENT OF ARTIFICIAL INTELLIGENCE & MACHINE LEARNING




YOUTH
EMPOWERMENT
YOUTH
EMPOWERMENT



# ಜಿಎಂಐಟಿಯಲ್ಲಿ ಹನಿವೆಲ್ ಕಂಪನಿಯ ಶ್ರೇಷ್ಠತೆಯ ಕೇಂದ್ರ ಸ್ಥಾಪನೆಯ ಉದ್ಘಾಟನೆ



ದಾವಣಗೆರೆ-ನಗರದ ಜಿಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ದಿನಾಂಕ 5ನೇ ಡಿಸೆಂಬರ್ ರಂದು ಬೆಳಗ್ಗೆ ಜಿಎಂ ಸಭಾಂಗಣದಲ್ಲಿ ಹನಿವೆಲ್ ಸೆಂಟರ್ ಆಫ್ ಎಕ್ಸಲೆನ್ಸ್ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಂಡ್ ಮಷೀನ್ ಲರ್ನಿಂಗ್ ಇಂಜಿನಿಯರಿಂಗ್ ವಿಭಾಗದಿಂದ ಕಾರ್ಯಕ್ರಮವನ್ನು ಬಹಳ ಅದ್ದೂರಿಯಾಗಿ ಮತ್ತು ಅಚ್ಚುಕಟ್ಟಾಗಿ ನೆರವೇರಿಸಲ್ಪಟ್ಟಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ವಿಭಾಗದ ಐಸಿಟಿ ಅಕ್ಯಾಡೆಮಿ ಮುಖ್ಯಸ್ಥರಾದ ಶ್ರೀ ವಿಷ್ಣು ಪ್ರಸಾದ್ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ, ಹನಿವೆಲ್ ಸೆಂಟರ್ ಆಫ್ ಎಕ್ಸಲೆನ್ಸ್ ಕರ್ನಾಟಕದಲ್ಲಿ ಇದು ಒಂಬತ್ತನೇ ಕೇಂದ್ರವಾಗಿದ್ದು, ಹಲವು ಅಡಚಣೆಗಳನ್ನು ದಾಟಿ ಇಂದು ಜಿಎಂಐಟಿಯಲ್ಲಿ ಉದ್ಘಾಟನೆ ಗೊಳ್ಳುತ್ತಿರುವುದು ಸಂತೋಷದಾಯಕವಾಗಿದೆ ಎಂದು ತಿಳಿಸಿದರು. ಈ ಶ್ರೇಷ್ಠತೆಯ ಕೇಂದ್ರದ ಮೂಲಕ ಹಲವು ಆಯೋಜಿಸುತ್ತಿದ್ದು, ಮೊದಲಿಗೆ ಕಂಪನಿಯು ಬಡತನ ರೇಖೆಗಿಂತ ಕೆಳಗಿರುವ ಅಂತಿಮ ವರ್ಷದ 120 ವಿದ್ಯಾರ್ಥಿಗಳನ್ನು ಗುರುತಿಸಿದ್ದು, ಅವರುಗಳಿಗೆ 15 ದಿನಗಳ ಎಡಬ್ಲ್ಯೂ ಎಸ್ ಕೋರ್ಸ್ಗಳ ಮೇಲೆ ತರಬೇತಿಯನ್ನು ನೀಡಿ ಕೈಗಾರಿಕೆಗಳಿಗೆ ತಕ್ಕಂತೆ ತಯಾರು ಮಾಡಲಾಗುವುದು ಮತ್ತು ತರಬೇತಿ ಹೊಂದಿದ ಎಲ್ಲಾ ವಿದ್ಯಾರ್ಥಿಗಳಿಗೂ ಉದ್ಯೋಗವಕಾಶವನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ ವೈ ವಿಜಯ್ ಕುಮಾರ್ ಮಾತನಾಡಿ, ನೀವೆಲ್ಲಾ ಅದೃಷ್ಟವಂತ ವಿದ್ಯಾರ್ಥಿಗಳು, ಕಂಪನಿಯೇ ನಿಮ್ಮ ಬಳಿ ಬಂದು ನಿಮಗೆ ಬೇಕಾದ ಎಲ್ಲಾ ರೀತಿಯ ತರಬೇತಿಯನ್ನು ನೀಡುತ್ತಿದ್ದು ಜೊತೆಗೆ ಉದ್ಯೋಗಾವಕಾಶವನ್ನು ಒದಗಿಸುತ್ತಿದೆ. ಇದರ ಸದುಪಯೋಗವನ್ನು ಪಡೆದುಕೊಂಡು ಉತ್ತಮ ವಿದ್ಯಾರ್ಥಿಗಳಾಗಿ ಹೊರ ಹೊಮ್ಮಬೇಕೆಂದು ತಿಳಿಸಿದರು.

ಜಿಎಂಐಟಿ ಕಾಲೇಜು ವಿವಿಧ ಪ್ರತಿಷ್ಠಿತ ಕಂಪನಿಗಳೊಡನೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದು, ಒಟ್ಟು 88 ಒಡಂಬಡಿಕೆಗಳು ಮತ್ತು 11 ಶ್ರೇಷ್ಠತಾ ಕೇಂದ್ರಗಳನ್ನು ಹೊಂದಿದೆ. ಆ ಮೂಲಕ ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಕೈಗಾರಿಕಾ ತರಬೇತಿಯನ್ನು ನೀಡುತ್ತಿದ್ದು, ಪಠ್ಯದ ಜೊತೆಗೆ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿಯನ್ನು ಹೆಚ್ಚಿಸುತ್ತಿದೆ ಎಂದು ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥರಾದ ತೇಜಸ್ವಿ ಕಟ್ಟಿಮನಿ ಟಿ ಆರ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಐಸಿಟಿ ಅಕ್ಯಾಡೆಮಿ ದಾವಣಗೆರೆ ವಿಭಾಗದ ಸಂಯೋಜಕರಾದ ಶ್ರೀ ಜಕಾವುಲ್ಲ, ಜಿಎಂಐಟಿ ಕಾಲೇಜಿನ ಡೀನ್ ಅಕಾಡೆಮಿಕ್ಸ್ ಮತ್ತು ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ ಬಿ ಎಸ್ ಸುನಿಲ್ ಕುಮಾರ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಂಡ್ ಮಷೀನ್ ಲರ್ನಿಂಗ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಶ್ರೀ ಕೀರ್ತಿ ಪ್ರಸಾದ್, ವಿವಿಧ ವಿಭಾಗಗಳ ಮುಖ್ಯಸ್ಥರುಗಳು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಹನಿವೆಲ್ ಕಂಪನಿಯ ಕೇಂದ್ರ ಸ್ಥಾಪನೆ

ದಾವಣಗೆರೆ: ಹನಿವೆಲ್ ಸೆಂಟರ್ ಆಫ್ ಎಕ್ಸಲೆನ್ಸ್ ಕರ್ನಾಟಕದಲ್ಲಿ ಇದು ಒಂಬತ್ತನೇಯ ಕೇಂದ್ರವಾಗಿದ್ದು, ದಾವಣಗೆರೆಯ ಜಿಎಂಐಟಿಯಲ್ಲಿ ಉದ್ಘಾಟನೆಗೊಳ್ಳುತ್ತಿದೆ ಎಂದು ಐಸಿಟಿ ಅಕಾಡೆಮಿ ಮುಖ್ಯಸ್ಥ ಮಧುಪ್ರಸಾದ ತಿಳಿಸಿದರು.

ನಗರದ ಜಿಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿಂದು ಹನಿವೆಲ್ ಸೆಂಟರ್ ಆಫ್ ಎಕ್ಸಲೆನ್ಸ್‌ನ್ನು ಉದ್ಘಾಟಿಸಿ ಮಾತನಾಡಿ, ಈ ಕೇಂದ್ರದ ಮೂಲಕ ಕಂಪನಿಯು [illegible] ರೇಟಿಂಗಿಂತ ಕೆಳಗಿರುವ ಅಂತಿಮ ವರ್ಷದ 120 ವಿದ್ಯಾರ್ಥಿಗಳ ಗುರುತಿಸಿದ್ದು, ಅವರಿಗೆ 15 ದಿನಗಳ ಎಐಎಂಎಲ್ [illegible] ಕೋರ್ಸ್‌ಗಳ ಮೇಲೆ ತರಬೇತಿಯನ್ನು ನೀಡಿ ಕೈಗಾರಿಕೆಗಳಿಗೆ ತಕ್ಕಂತೆ ತಯಾರು ಮಾಡಿ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಒದಗಿಸಲಾಗುತ್ತಿದೆ ಎಂದು ತಿಳಿಸಿದರು. ಕಾಲೇಜಿನ ಪ್ರಾಚಾರ್ಯ ಡಾ. ವೈ. ವಿಜಯ ಕುಮಾರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ತರಬೇತಿ ಹಾಗೂ ಉದ್ಯೋಗ ವಿಭಾಗದ ಮುಖ್ಯಸ್ಥ ಬಿ.ಆರ್. ತೇಜಸ್ವಿ ಕಟ್ಟಿಮನಿ, ಐಸಿಟಿ ಅಕಾಡೆಮಿಯ ಸಂಯೋಜಕ ಬಸವಪ್ರಭು, ಡಾ. ಬಿ.ಎಸ್. ಸುನೀಲ್‌ಕುಮಾರ, ಶಶಿಪ್ರಸಾದ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳಿದ್ದರು.



# ಜಿಎಂಐಟಿಯಲ್ಲಿ ಹನಿವೆಲ್ ಕಂಪನಿ ಕೇಂದ್ರ

ಪ್ರಜಾವಾಣಿ ವಾರ್ತೆ

**ದಾವಣಗೆರೆ:** ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯ (ಜಿಎಂಐಟಿ) ಯಲ್ಲಿ ಹನಿವೆಲ್ ಕಂಪನಿಯ ಕೇಂದ್ರದ ಉದ್ಘಾಟನಾ ಸಮಾರಂಭ ಸೋಮವಾರ ನಡೆಯಿತು.

ಕರ್ನಾಟಕ ರಾಜ್ಯದ 9ನೇ ಕೇಂದ್ರವಾಗಿ ಜಿಎಂಐಟಿಯಲ್ಲಿ ಕೇಂದ್ರ ಸ್ಥಾಪಿಸಲಾಗಿದೆ. ಕೇಂದ್ರದ ಮೂಲಕ ಹಲವು ತರಬೇತಿ ಆಯೋಜಿಸಲಾಗುತ್ತಿದೆ. ಮೊದಲು ಬಡತನ ರೇಖೆಗಿಂತ ಕೆಳಗಿರುವ ಅಂತಿಮ ವರ್ಷದ 120 ವಿದ್ಯಾರ್ಥಿಗಳನ್ನು ಗುರುತಿಸಲಾಗಿದ್ದು, ಅವರಿಗೆ 15 ದಿನಗಳ ತರಬೇತಿ ನೀಡಿ ಕೈಗಾರಿಕೆಗಳಿಗೆ ತಕ್ಕಂತೆ ತಯಾರು ಮಾಡಲಾಗುವುದು. ತರಬೇತಿ ಹೊಂದಿದ ಎಲ್ಲಾ ವಿದ್ಯಾರ್ಥಿಗಳಿಗೂ ಉದ್ಯೋಗವಕಾಶ ಒದಗಿಸಲಾಗುವುದು ಎಂದು ಮಾಹಿತಿ ಮತ್ತು ಸಂವಹನ ಅಕಾಡೆಮಿ (ಐಸಿಟಿ) ಕರ್ನಾಟಕ ವಿಭಾಗದ ಮುಖ್ಯಸ್ಥ ವಿಷ್ಣು ಪ್ರಸಾದ್ ಹೇಳಿದರು.

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಂಡ್ ಮಷಿನ್ ಲರ್ನಿಂಗ್ ಎಂಜಿನಿಯರಿಂಗ್ ವಿಭಾಗದಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು.



ದಾವಣಗೆರೆಯ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೋಮವಾರ ಹನಿವೆಲ್ ಕಂಪನಿಯ ಕೇಂದ್ರದ ಉದ್ಘಾಟನಾ ಸಮಾರಂಭ ನಡೆಯಿತು.

‘ಕೇಂದ್ರದ ಮೂಲಕ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ತರಬೇತಿ ನೀಡಲಾಗುವುದು. ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು’ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ವೈ. ವಿಜಯ್ ಕುಮಾರ್ ಸಲಹೆ ನೀಡಿದರು.

ಜಿಎಂಐಟಿ ಕಾಲೇಜು ವಿವಿಧ ಪ್ರತಿಷ್ಠಿತ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಒಟ್ಟು 88 ಒಡಂಬಡಿಕೆಗಳು ಮತ್ತು 11 ಶ್ರೇಷ್ಠತಾ ಕೇಂದ್ರಗಳನ್ನು ಹೊಂದಿದೆ. ವಿದ್ಯಾರ್ಥಿಗಳಿಗೆ ಕೈಗಾರಿಕಾ ತರಬೇತಿಯನ್ನು ನೀಡಲಾಗುತ್ತಿದೆ ಎಂದು ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ತೇಜಸ್ವಿ ಕಟ್ಟಿಮನಿ ಟಿ.ಆರ್. ತಿಳಿಸಿದರು.

ಐಸಿಟಿ ಅಕಾಡೆಮಿ ದಾವಣಗೆರೆ ವಿಭಾಗದ ಸಂಯೋಜಕ ಜಕಾವುಲ್ಲ, ಕಾಲೇಜಿನ ಡೀನ್ ಡಾ.ಬಿ.ಎಸ್. ಸುನಿಲ್‌ಕುಮಾರ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಂಡ್ ಮಷಿನ್ ಲರ್ನಿಂಗ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಕೀರ್ತಿಪ್ರಸಾದ್, ವಿವಿಧ ವಿಭಾಗಗಳ ಮುಖ್ಯಸ್ಥರು ಇದ್ದರು.

## ಜಿಎಂಐಟಿಯಲ್ಲಿ ಹನಿವೆಲ್ ಕಂಪನಿಯ ಶ್ರೇಷ್ಠತೆಯ ಕೇಂದ್ರ ಸ್ಥಾಪನೆಯ ಉದ್ಘಾಟನಾ ಸಮಾರಂಭ

# ಕರ್ನಾಟಕದಲ್ಲಿ 9ನೇ ಕೇಂದ್ರವಾಗಿ ಸ್ಥಾಪನೆ – ವಿಷ್ಣು ಪ್ರಸಾದ್, ಐಸಿಟಿ ಅಕ್ಯಾಡೆಮಿ ಕರ್ನಾಟಕ ಹೆಡ್



ದಾವಣಗೆರೆ, ಡಿ. 5 : ನಗರದ ಪ್ರತಿಷ್ಠಿತ ಜಿಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ದಿನಾಂಕ 5ನೇ ಡಿಸೆಂಬರ್ ರಂದು ಬೆಳಗ್ಗೆ ಜಿಎಂ ಸಭಾಂಗಣದಲ್ಲಿ ಹನಿವೆಲ್ ಸೆಂಟರ್ ಆಫ್ ಎಕ್ಸಲೆನ್ಸ್ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಂಡ್ ಮಷೀನ್ ಲರ್ನಿಂಗ್ ಇಂಜಿನಿಯರಿಂಗ್ ವಿಭಾಗದಿಂದ ಕಾರ್ಯಕ್ರಮವನ್ನು ಬಹಳ ಅದ್ದೂರಿಯಾಗಿ ಮತ್ತು ಅಚ್ಚುಕಟ್ಟಾಗಿ ನೆರವೇರಿಸಲ್ಪಟ್ಟಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ವಿಭಾಗದ ಐಸಿಟಿ ಅಕ್ಯಾಡೆಮಿ ಮುಖ್ಯಸ್ಥರಾದ ಶ್ರೀ ವಿಷ್ಣು ಪ್ರಸಾದ್ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ, ಹನಿವೆಲ್ ಸೆಂಟರ್ ಆಫ್ ಎಕ್ಸಲೆನ್ಸ್ ಕರ್ನಾಟಕದಲ್ಲಿ ಇದು ಒಂಬತ್ತನೇ ಕೇಂದ್ರವಾಗಿದ್ದು, ಹಲವು ಅಡಚಣೆಗಳನ್ನು ದಾಟಿ ಇಂದು ಜಿಎಂಐಟಿಯಲ್ಲಿ ಉದ್ಘಾಟನೆಗೊಳ್ಳುತ್ತಿರುವುದು ಸಂತೋಷದಾಯಕವಾಗಿದೆ ಎಂದು ತಿಳಿಸಿದರು. ಈ ಶ್ರೇಷ್ಠತೆಯ ಕೇಂದ್ರದ ಮೂಲಕ ಹಲವು ಆಯೋಜಿಸುತ್ತಿದ್ದು, ಮೊದಲಿಗೆ ಕಂಪನಿಯು ಬಡತನ ರೇಖೆಗಿಂತ ಕೆಳಗಿರುವ ಅಂತಿಮ ವರ್ಷದ 120 ವಿದ್ಯಾರ್ಥಿಗಳನ್ನು ಗುರುತಿಸಿದ್ದು, ಅವರುಗಳಿಗೆ 15 ದಿನಗಳ ಎಡಬ್ಲ್ಯೂ ಎಸ್ ಕೋರ್ಸ್ಗಳ ಮೇಲೆ ತರಬೇತಿಯನ್ನು ನೀಡಿ ಕೈಗಾರಿಕೆಗಳಿಗೆ ತಕ್ಕಂತೆ ತಯಾರು ಮಾಡಲಾಗುವುದು ಮತ್ತು ತರಬೇತಿ ಹೊಂದಿದ ಎಲ್ಲಾ ವಿದ್ಯಾರ್ಥಿಗಳಿಗೂ ಉದ್ಯೋಗವಕಾಶವನ್ನು ಒದಗಿಸುವಲಾಗುವುದು ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ ವೈ ವಿಜಯ್ ಕುಮಾರ್ ಮಾತನಾಡಿ, ನೀವೆಲ್ಲಾ ಅದೃಷ್ಟವಂತ ವಿದ್ಯಾರ್ಥಿಗಳು, ಕಂಪನಿಯೇ ನಿಮ್ಮ ಬಳಿ ಬಂದು ನಿಮಗೆ ಬೇಕಾದ ಎಲ್ಲಾ ರೀತಿಯ ತರಬೇತಿಯನ್ನು ನೀಡುತ್ತಿದ್ದು ಜೊತೆಗೆ ಉದ್ಯೋಗಾವಕಾಶವನ್ನು ಒದಗಿಸುತ್ತಿದೆ. ಇದರ ಸದುಪಯೋಗವನ್ನು ಪಡೆದುಕೊಂಡು ಉತ್ತಮ ವಿದ್ಯಾರ್ಥಿಗಳಾಗಿ ಹೊರ ಹೊಮ್ಮಬೇಕೆಂದು ತಿಳಿಸಿದರು.

ಜಿಎಂಐಟಿ ಕಾಲೇಜು ವಿವಿಧ ಪ್ರತಿಷ್ಠಿತ ಕಂಪನಿಗಳೊಡನೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದು, ಒಟ್ಟು 88 ಒಡಂಬಡಿಕೆಗಳು ಮತ್ತು 11 ಶ್ರೇಷ್ಠತಾ ಕೇಂದ್ರಗಳನ್ನು ಹೊಂದಿದೆ. ಆ ಮೂಲಕ ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಕೈಗಾರಿಕಾ ತರಬೇತಿಯನ್ನು ನೀಡುತ್ತಿದ್ದು, ಪಠ್ಯದ ಜೊತೆಗೆ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿಯನ್ನು ಹೆಚ್ಚಿಸುತ್ತಿದೆ ಎಂದು ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥರಾದ ತೇಜಸ್ವಿ ಕಟ್ಟಿಮನಿ ಟಿ ಆರ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಐಸಿಟಿ ಅಕ್ಯಾಡೆಮಿ ದಾವಣಗೆರೆ ವಿಭಾಗದ ಸಂಯೋಜಕರಾದ ಶ್ರೀ ಜಕಾವುಲ್ಲ, ಜಿಎಂಐಟಿ ಕಾಲೇಜಿನ ಡೀನ್ ಅಕಾಡೆಮಿಕ್ಸ್ ಮತ್ತು ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ ಬಿ ಎಸ್ ಸುನಿಲ್ ಕುಮಾರ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಂಡ್ ಮಷೀನ್ ಲರ್ನಿಂಗ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಶ್ರೀ ಕೀರ್ತಿ ಪ್ರಸಾದ್, ವಿವಿಧ ವಿಭಾಗಗಳ ಮುಖ್ಯಸ್ಥರುಗಳು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.